ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಕವಿಪ್ರನಿನಿ/ಬಿ9/2013/07-08

ದಿನಾಂಕ : 12 MAY 2022

ಲಗತ್ತು: ಒಂದು.

## ಸುತ್ತೋಲೆ

**ವಿಷಯ:-** ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ರ ಅಧಿನಿಯಮದ ಸಂಖ್ಯೆ 2 (ಡಿ) ರ ಪ್ರಕಾರ ಕವಿಪ್ರನಿನಿಯಲ್ಲಿ ಚಾಲ್ತಿಯಲ್ಲಿರುವ/ ಕೈಗೊಳ್ಳಲಾಗುವ ಸಮಗ್ರ ಕಾರ್ಯ ಗುತ್ತಿಗೆ / ಅಂಶಿಕ ಕಾರ್ಯ ಗುತ್ತಿಗೆ/ ಇತರೆ ಗುತ್ತಿಗೆ ಕಾಮಗಾರಿಗಳಲ್ಲಿ ಸಾಮಾಗ್ರಿ ಸರಬರಾಜು ವೆಚ್ಚ, ಕೂಲಿ ವೆಚ್ಚ ಮೊತ್ತದಲ್ಲಿ ಅನ್ವಯಿಸುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕದ ಮೊತ್ತವನ್ನು ಕಡಿತಗೊಳಿಸಿ ಪಾವತಿಸುವ ಬಗ್ಗೆ- ಮುಖ್ಯ ಕಾಯನಿರ್ವಾಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹೆಸರಿನಲ್ಲಿ ಹೊಸದಾಗಿ ತೆರೆದಿರುವ K2 ಖಾತೆಗೆ ಜಮಾ ಮಾಡುವ ಬಗ್ಗೆ.

**ಉಲ್ಲೇಖ:-**
1. ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ9/2013/07-08 ದಿನಾಂಕ 25/06/2007.
2. ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ9/2013/07-08 ದಿನಾಂಕ 20/03/2018.
3. ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ9/2013/07-08 ದಿನಾಂಕ 29/11/2018.
4. ಮುಖ್ಯ ಕಾಯನಿರ್ವಾಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ರವರ ಪತ್ರ ಸಂಖ್ಯೆ ಸಿಡಬ್ಲ್ಯೂಡಬ್ಲ್ಯೂಬಿ/ಸೆಸ್/ಖಜಾನೆ/ಸಿಆರ್-1/2022-23 ದಿನಾಂಕ 01/04/2022.

*******

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಕಾಯ್ದೆ 1996 ಮತ್ತು ನಿಯಮಗಳು 1998 ರ ಬಗ್ಗೆ ದಿನಾಂಕ 18/01/2007 ಹಾಗೂ 28/02/2007 ಸರ್ಕಾರದ ಆದೇಶವನ್ನು ಕವಿಪ್ರನಿನಿಯಲ್ಲಿ ಅಳವಡಿಸಿಕೊಂಡು ಕರ್ನಾಟಕ ಕಟ್ಟಡ ಮತ್ತು ಇತರೆ ಕಾರ್ಮಿಕರ ಕಲ್ಯಾಣ ಮಂಡಳಿಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕವನ್ನು ಕಡಿತಗೊಳಿಸಲು, ಪಾವತಿಸಲು ಉಲ್ಲೇಖ (1) ರ ನಿಗಮದ ಆದೇಶದಲ್ಲಿ ಸೂಚಿಸಲಾಗಿರುತ್ತದೆ. ಮುಂದುವರೆದಂತೆ, ಕವಿಪ್ರನಿನಿಯಲ್ಲಿ ಚಾಲ್ತಿಯಲ್ಲಿರುವ / ಕೈಗೊಳ್ಳಲಾಗುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ರ ಅಧಿನಿಯಮ 2 (ಡಿ) ಯ ವ್ಯಾಪ್ತಿಗೊಳಪಡುವ ಸಮಗ್ರ ಕಾರ್ಯ / ಅಂಶಿಕ ಕಾರ್ಯ ಮತ್ತು ಇತರೆ ಗುತ್ತಿಗೆಯ ಕಾಮಗಾರಿ ಬಿಲ್ಲುಗಳಲ್ಲಿ ಸಾಮಾಗ್ರಿ ಸರಬರಾಜು (Supply portion) ಮತ್ತು ಕೂಲಿ ವೆಚ್ಚಗಳನ್ನು (Labour Portion) ಪರಿಗಣಿಸಿ, ಶೇ. 1% ರಷ್ಟು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕವನ್ನು ಕಡಿತಗೊಳಿಸಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಪಾವತಿಸಲು ಉಲ್ಲೇಖ (2) ರಲ್ಲಿನ ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿರುತ್ತದೆ.

ಮುಖ್ಯ ಕಾಯನಿರ್ವಾಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಉಲ್ಲೇಖ (4) ರ ಪತ್ರದಲ್ಲಿ ರಾಜ್ಯ ಹುಜೂರು ಖಜಾನೆಯಲ್ಲಿ ಚಾಲ್ತಿಯಿರುವ ಠೇವಣಿ ಖಾತೆಯು "ಉಪ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ" ಇವರ ಹೆಸರಿನಲ್ಲಿ ಲೆಕ್ಕಶೀರ್ಷಿಕೆ "8449-00-120-0-18-660" ರಡಿಯಲ್ಲಿನ ಠೇವಣಿ ಖಾತೆ ಸಂಖ್ಯೆ 26572E180 ನ್ನು ತೆರೆದಿದ್ದು, ಸದರಿ ಖಾತೆಗೆ ಕವಿಪ್ರನಿನಿಯಿಂದ ಪಾವತಿ ಮಾಡುತ್ತಿರುವ ಕಾರ್ಮಿಕ ಕಲ್ಯಾಣ ಸುಂಕ ಮೊತ್ತವು ಖಜಾನೆಯಲ್ಲಿ

ಬಾಕಿಯಿರುತ್ತದೆ ಹಾಗೂ ಸದರಿ ಮೊತ್ತವು ಮಂಡಳಿಯ ಸುಂಕದ ಖಾತೆಗೆ ವಿಳಂಬವಾಗುತ್ತಿದ್ದು, ಪಾವತಿಸಿರುವ ಸುಂಕ ಮೊತ್ತಕ್ಕೆ ಅನುಷ್ಠಾನಾಧಿಕಾರಿಗಳಿಗೆ ಸ್ವೀಕೃತಿ ನೀಡುವುದಕ್ಕೂ ಕಷ್ಟಸಾಧ್ಯವಾಗಿರುತ್ತದೆಂದು ತಿಳಿಸಿರುತ್ತಾರೆ. ಆದಕಾರಣ, ಖಜಾನೆ-2 ರಲ್ಲಿ ಸಂಗ್ರಹವಾಗುವ ಶೇಕಡಾ 1 ರಷ್ಟು ಕಟ್ಟಡ ಕಾರ್ಮಿಕರ ಸುಂಕ ಮೊತ್ತವನ್ನು **"ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು"** ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹೆಸರಿನಲ್ಲಿ ಹೊಸದಾಗಿ ಲೆಕ್ಕಶೀರ್ಷಿಕೆ **"8449-00-120-0-18-660"** ರಡಿಯಲ್ಲಿ

**DDO Code 997480** ಠೇವಣಿ ಖಾತೆ ಸಂಖ್ಯೆ **26572E181** ಗೆ ದಿನಾಂಕ 01/04/2022 ರ ನಂತರ ಸಂಗ್ರಹವಾಗುವ ಕಾರ್ಮಿಕ ಕಲ್ಯಾಣ ಸುಂಕ ಮೊತ್ತವನ್ನು ಪಾವತಿಸಲು ಕೋರಿರುತ್ತಾರೆ.

**ಈ ಹಿನ್ನೆಲೆಯಲ್ಲಿ, ದಿನಾಂಕ 01/04/2022 ರ ನಂತರ ಕವಿಪ್ರನಿನಿಯ ಎಲ್ಲಾ ಕಾಮಗಾರಿಗಳ ಸಂಬಂಧ, ಶೇಕಡಾ 1 ರಷ್ಟು ಕಡಿತಗೊಳಿಸುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕವನ್ನು ತಪ್ಪದೆ ಲೆಕ್ಕ ಶೀರ್ಷಿಕೆ "8449-00-120-0-18-660" ರಡಿಯಲ್ಲಿ DDO Code 997480 ಠೇವಣಿ ಖಾತೆ ಸಂಖ್ಯೆ 26572E181 ಗೆ ಪಾವತಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಸದರಿ ಮಂಡಳಿಯ ಲೆಕ್ಕ ಶೀರ್ಷಿಕೆ ಮತ್ತು ಠೇವಣಿ ಖಾತೆ ಸಂಖ್ಯೆ ಸಂಪೂರ್ಣ ವಿವರಗಳನ್ನು ಅನುಬಂಧ 1 ರಲ್ಲಿ ಲಗತ್ತಿಸಿದೆ.**

B R 12/5/22

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ), ಕವಿಪ್ರನಿನಿ.
5. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ) / (ಸಿವಿಲ್), ಕವಿಪ್ರನಿನಿ.
6. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಸದರಿ ಸುತ್ತೋಲೆಯನ್ನು ನಿಗಮದ ಅಂರ್ತಜಾಲದಲ್ಲಿ ಪ್ರಕಟಿಸಲು ಕೋರಿದೆ.
7. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
8. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕವಿಪ್ರನಿನಿ.
10. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ.
11. ವ್ಯವಸ್ಥಾಪಕರು (ಆ.ನಿ)/ ವ್ಯವಸ್ಥಾಪಕರು (ನ ಮತ್ತು ಲೆ), ಕವಿಪ್ರನಿನಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶರು ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ.ಸಂ)/ ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ನಿಗಮ ಕಾರ್ಯಾಲಯ, ಬೆಂಗಳೂರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಕಟ್ಟಡ ಮತ್ತು
ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

ಕಲ್ಯಾಣ ಸುರಕ್ಷ ಭವನ, ಐಟಿಐ ಕಾಲೇಜು ಆವರಣ
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029
ಕಛೇರಿ : 080 2975 3350
karbuildworkerswelfare@gmail.com

ಸಂಖ್ಯೆ:ಸಿಡಬ್ಲ್ಯೂಡಬ್ಲ್ಯೂಬಿ/ಸೆಸ್/ಖಜಾನೆ/ಸಿಆರ್-01/2022-23 | 12545 ದಿನಾಂಕ: 01-04-2022

M.D.
18 APR 2022
KPTCL

C.O.No: 135482

ಗೆ,
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
ಕಾವೇರಿ ಭವನ, ಕೆ.ಜಿ ರಸ್ತೆ,
ಬೆಂಗಳೂರು-09.

ಮಾನ್ಯರೇ,

**ವಿಷಯ:** ಖಜಾನೆ-2 ರಲ್ಲಿ ಸಂಗ್ರಹವಾಗುವ ಶೇ.1% ರಷ್ಟು ಕಟ್ಟಡ ಕಾರ್ಮಿಕರ ಕಲ್ಯಾಣ ಸುಂಕ ಮೊತ್ತವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿ ಹೆಸರಿನಲ್ಲಿ ಖಜಾನೆಯಲ್ಲಿ ಹೊಸದಾಗಿ ತೆರೆದಿರುವ K2 ಖಾತೆಗೆ ಜಮೆ ಮಾಡುವ ಕುರಿತು.

**ಉಲ್ಲೇಖ:** 1.ಆರ್ಥಿಕ ಇಲಾಖೆ ಪತ್ರ ಸಂಖ್ಯೆ: ಆಇ/283/ಅನಿ/2021 ದಿನಾಂಕ:06-01-2022
2.ಖಜಾನೆ ಆಯುಕ್ತಾಲಯದ ಪತ್ರ ಸಂಖ್ಯೆ: ಖನಿ/ಆಶಾ-3/ಕೆ-2/2022-23 ದಿನಾಂಕ:01-04-2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಅಡಿಯಲ್ಲಿ ರಚಿಸಲಾಗಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಪನ್ಮೂಲವನ್ನು ಕ್ರೋಢೀಕರಿಸುವ ಸಲುವಾಗಿ, ಕಟ್ಟಡ ಮತ್ತು ಇತರೆ ನಿರ್ಮಾಣಗಾರರು ಹಾಗೂ ನಿಯೋಜಕರಿಂದ ನಿರ್ಮಾಣ ವೆಚ್ಚದ ಮೇಲೆ ಶೇ.1ರಷ್ಟು ಸುಂಕ ಸಂಗ್ರಹಿಸಿ, ಸಂಗ್ರಹಿಸಿದ ಸುಂಕ ಮೊತ್ತವನ್ನು ಮಂಡಳಿಯ ಖಜಾನೆ-2 ಮುಖಾಂತರ ವಿವಿಧ ಖಜಾನೆಗಳಿಂದ "ಉಪ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ" ಇವರ ಹೆಸರಿನ ಲೆಕ್ಕ ಶೀರ್ಷಿಕೆ "8449-00-120-0-18-660" ರಡಿಯಲ್ಲಿನ ಠೇವಣಿ ಖಾತೆ ಸಂಖ್ಯೆ 26572E180 ಗೆ ಈವರೆಗೆ ವರ್ಗಾಯಿಸಲಾಗುತ್ತಿತ್ತು.

ಆದರೆ, ಉಲ್ಲೇಖಿತ (1)ರ ಆರ್ಥಿಕ ಇಲಾಖೆ ಪತ್ರದಲ್ಲಿ ತಿಳಿಸಿರುವಂತೆ, ಈಗಾಗಲೇ ರಾಜ್ಯ ಹುಜೂರು ಖಜಾನೆಯಲ್ಲಿ ಚಾಲ್ತಿಯಿರುವ ಠೇವಣಿ ಖಾತೆಯು, "ಉಪ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ" ಇವರ ಹೆಸರಿನಲ್ಲಿ ಲೆಕ್ಕ ಶೀರ್ಷಿಕೆ "8449-00-120-0-18-660" ರಡಿಯಲ್ಲಿ ಠೇವಣಿ ಖಾತೆ ಸಂಖ್ಯೆ 26572E180 ನ್ನು ತೆರೆದಿದ್ದು, ಸದರಿ ಖಾತೆಗೆ ತಾವು ಪಾವತಿಮಾಡುತ್ತಿರುವ ಕಾರ್ಮಿಕ ಕಲ್ಯಾಣ ಸುಂಕ ಮೊತ್ತವು ಖಜಾನೆಯಲ್ಲಿ ಬಾಕಿಯಿರುತ್ತದೆ. ಹಾಗೂ ಸದರಿ ಮೊತ್ತವು ಮಂಡಳಿಯ ಸುಂಕ ಖಾತೆಗೆ ವರ್ಗಾವಣೆಯಾಗುವುದು ವಿಳಂಬವಾಗುತ್ತಿದ್ದು, ಪಾವತಿಸಿರುವ ಸುಂಕ ಮೊತ್ತಕ್ಕೆ ಅನುಷ್ಠಾನಾಧಿಕಾರಿಗಳಿಗೆ ಸ್ವೀಕೃತಿ ನೀಡುವುದಕ್ಕೂ ಕಷ್ಟಸಾಧ್ಯವಾಗಿರುತ್ತದೆಂದು ರಾಜ್ಯ ಹುಜೂರು ಖಜಾನೆ ರವರು ತಿಳಿಸಿರುತ್ತಾರೆ.

ಮುಂದುವರೆದು, ಖಜಾನೆ-2 ರಲ್ಲಿ ಸಂಗ್ರಹವಾಗುವ ಶೇ.1% ರಷ್ಟು ಕಟ್ಟಡ ಕಾರ್ಮಿಕರ ಕಲ್ಯಾಣ ಸುಂಕ ಮೊತ್ತವನ್ನು "ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು" ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿ ಹೆಸರಿನಲ್ಲಿ ಹೊಸದಾಗಿ ಲೆಕ್ಕ ಶೀರ್ಷಿಕೆ "8449-00-120-0-18-660" ರಡಿಯಲ್ಲಿ ಠೇವಣಿ ಖಾತೆ ಸಂಖ್ಯೆ 26572E181 ನ್ನು ಉಲ್ಲೇಖಿತ ಪತ್ರ (2)ರ ಮುಖಾಂತರ ತೆರೆಯಲಾಗಿರುತ್ತದೆ.

ಆದ್ದರಿಂದ, ದಿನಾಂಕ:01-04-2022 ರ ನಂತರ ಸಂಗ್ರಹವಾಗುವ ಕಾರ್ಮಿಕ ಕಲ್ಯಾಣ ಸುಂಕ ಮೊತ್ತವನ್ನು ಲೆಕ್ಕ ಶೀರ್ಷಿಕೆ **"8449-00-120-0-18-660"** ರಡಿಯಲ್ಲಿ **"DDO Code 997480"** ಠೇವಣಿ ಖಾತೆ ಸಂಖ್ಯೆ **26572E181** ಗೆ ತಪ್ಪದೆ ಪಾವತಿಸುವಂತೆ ಈ ಮೂಲಕ ಕೋರಿದೆ. ಮಂಡಳಿಯ ಲೆಕ್ಕ ಶೀರ್ಷಿಕೆ ಮತ್ತು ಠೇವಣಿ ಖಾತೆ ಸಂಖ್ಯೆಯ ಸಂಪೂರ್ಣ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

(ಗುರುಪ್ರಸಾದ್ ಎಂ.ಪಿ ಐ.ಆರ್.ಎಸ್)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕ.ಕ ಮತ್ತು ಇ.ನಿ.ಕಾ.ಕ.ಮಂಡಳಿ,
ಬೆಂಗಳೂರು

ಅನುಬಂಧ-01

| Treasury Name | DIRECTORATE | K2 DDO CODE | OLD_DDO_CODE | DESIGNATION_POST | K2 ACCOUNT NO | K2 HOA | Description of HOA |
|---|---|---|---|---|---|---|---|
| ATE HUZUR TREASURY BENGALU | DEPARTMENT OF LABOUR | 997480 | 9999LB0001 | SECREATARY AND CHIEF EXECUTIVE OFFICER ,KARNATAKA STATE BUILDING AND OTHER CONSTRUCTION WELFARE BOARD,BENGALURU | 26572E181 | 8449~00~120~0~18~660 | LABOUR CESS ACCOUNT OF SECREATARY AND CHIEF EXECUTIVE OFFICER ,KARNATAKA STATE BUILDING AND OTHER CONSTRUCTION WELFARE BOARD,BENGALURU |